# ವಾರ್ತಾ ವಿಶ್ಲೇಷಣೆ

## ಮಾನವನ ಮಾರಾಟ

ನಾವಿಂದು ವಾಣಿಜ್ಯಯುಗದಲ್ಲಿದ್ದೇವೆ. ಎಲ್ಲವನ್ನೂ ಮಾರಾಟದ ದೃಷ್ಟಿಯಿಂದಲೇ ನೋಡುತ್ತೇವೆ. ಪ್ರಕೃತಿದತ್ತವಾದ ಗಾಳಿ ನೀರುಗಳನ್ನೂ ಮಾರಾಟ ಮಾಡುತ್ತೇವೆ. ಆಕಾಶವನ್ನೂ ಸೈಬರ್ ಸ್ಪೇಸ್ ರೂಪದಲ್ಲಿ ಮಾರಾಟ ಮಾಡುತ್ತೇವೆ. ನಮ್ಮ ದೇಹದ ಅಂಗಾಂಗಗಳನ್ನೂ ಮಾರಾಟಮಾಡುತ್ತೇವೆ. ಈಗ ಜೆನೆಟಿಕ್ ಇಂಜಿನೀರಿಂಗ್ ಎಷ್ಟು ಮುಂದುವರಿಯುತ್ತಿದೆಯೆಂದರೆ ಮುಂದೆ ಒಂದು ಕಾಲದಲ್ಲಿ ನಮಗೆ ಬೇಕಾದ ದೈಹಿಕ ಅಂಗಾಂಗಗಳನ್ನು ಪ್ರಯೋಗಶಾಲೆಯಲ್ಲೇ ತಯಾರಿಸಿ ಮಾರಾಟ ಮಾಡಬಹುದು ಮತ್ತು ಅಂಗಡಿಗೆ ಹೋಗಿ ಬೇಕಾದ ಅಂಗಗಳನ್ನು ಕೊಂಡುಕೊಳ್ಳಬಹುದು! ಬರಿ ಅಂಗಾಂಗಳನ್ನೇ ಏಕೆ ವ್ಯಕ್ತಿಗಳನ್ನೂ ಮಾರಾಟ ಮಾಡುತ್ತಾರೆ. ಗುಲಾಮರನ್ನು ಮಾರಾಟದ ವಸ್ತುಗಳಂತೆ ಮಾರಾಟ ಮಾಡುವುದು ಪುರಾತನ ಕಾಲದಿಂದಲೂ ನಡೆದು ಬಂದ ಪದ್ಧತಿ. ಯುವತಿಯರನ್ನು ಮನವೊಲಿಸಿಯೋ ಅಥವಾ ಬಲಾತ್ಕಾರವಾಗಿ ಕರೆದುಕೊಂಡು ಹೋಗಿಯೋ ಬೇರೆ ಊರುಗಳಲ್ಲಿಯೊ ಬೇರೆ ದೇಶಗಳಲ್ಲಿಯೊ ವೇಶ್ಯಾವಾಟಿಕೆಗಳಿಗೆ ಮಾರಾಟ ಮಾಡುವುದು ಈಗಲೂ ನಡೆಯುತ್ತಿದೆ.

ಇತ್ತೀಚೆಗಿನ *TIME*ಪತ್ರಿಕೆ ವರದಿಯ ಪ್ರಕಾರ ಚೀನಾದ ಕೆಲವು ಭಾಗಗಳಲ್ಲಿ ಮಕ್ಕಳನ್ನು ಹೆತ್ತು ಮಾರಾಟ ಮಾಡುತ್ತಾರಂತೆ—ಮಾರಾಟಕ್ಕಾಗಿಯೇ ಹೆರುತ್ತಾರಂತೆ. ತರಕಾರಿಯನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಿ ಮಾರಾಟ ಮಾಡುವಂತೆ ಹುಟ್ಟಿದ ಕೆಲವೇ ದಿನಗಳಲ್ಲಿ ಶಿಶುಗಳನ್ನು ತಾಯಂದಿರಿಂದ ಕೊಂಡುಕೊಂಡು ದಳ್ಳಾಳಿಗಳು ಬೇರೆ ಊರುಗಳಿಗೆ ತರಕಾರಿಯ ಜತೆ ತೆಗೆದುಕೊಂಡು ಹೋಗಿ ಮಕ್ಕಳಿಲ್ಲದವರಿಗೆ ಮಾರಾಟ ಮಾಡುತ್ತಾರಂತೆ. ಲಾರಿಯಲ್ಲಿ ಆ ಎಳೆ ಶಿಶುಗಳನ್ನು ನೋಡಿಕೊಳ್ಳಲು ಒಬ್ಬಳು ದಾದಿ ಇರುತ್ತಾಳೆ. ಆದರೂ ಪ್ರಯಾಣದ ವೇಳೆ ಅನೇಕ ಶಿಶುಗಳು ಸಾವನ್ನಪ್ಪುತ್ತವೆ. ಹೆಣ್ಣು ಮಗುವಿಗೆ ೨೫ ಡಾಲರ್, ಗಂಡು ಮಗುವಿಗೆ ೫೦ ಡಾಲರ್. ಚೀನಾದ ಯುನ್ನಾನ್ ಎಂಬ ಗುಡ್ಡಗಾಡು ಪ್ರದೇಶದ ಜನರು ಬಡತನದ ನಿಮಿತ್ತ ಈ ಶಿಶುಮಾರಾಟ ವೃತ್ತಿಗೆ ಇಳಿದಿದ್ದಾರೆ. ಭಾರತದಲ್ಲೂ ಈ ಪಿಡುಗು ಇದ್ದೇ ಇದೆ. ಗುಲ್ಬರ್ಗಾ ಮತ್ತು ಆಂಧ್ರಪ್ರದೇಶದಲ್ಲಿ ಹೆಣ್ಣುಶಿಶುಗಳನ್ನು ಮಾರಾಟ ಮಾಡುವ ಅಮಾನುಷ ಕೃತ್ಯದ ವರದಿ ಇತ್ತೀಚೆಗೆ ಪತ್ರಿಕೆಗಳಲ್ಲಿ ಕಾಣಿಸಿಕೊಂಡಿದೆ.

**ವ್ಯಾಪಾರ ಮನೋಭಾವ ವ್ಯಾಪಕವಾಗಿ ಹರಡಿಕೊಂಡರೆ ಜನರು ಎಲ್ಲ ಮಾನವೀಯ ಮೌಲ್ಯಗಳನ್ನೂ ಕಳೆದುಕೊಳ್ಳುತ್ತಾರೆ, ವ್ಯಕ್ತಿಗಳು ಬಳಕೆಯ ವಸ್ತುಗಳಾಗುತ್ತಾರೆ. ವ್ಯಾಪಾರ ಮೌಲ್ಯವೇ ಪ್ರಧಾನವಾಗುತ್ತದೆ.** ☆

## ಯೋಗದ ಸುಯೋಗ

ಯೋಗಕ್ಕೆ ಈಗ ಶುಕ್ರದೆಸೆ. ಭಾರತದಲ್ಲಿಯೂ ವಿದೇಶಗಳಲ್ಲಿಯೂ ಅದು ಹೆಚ್ಚು ಪ್ರಚಾರವಾಗುತ್ತಿದೆ. ಸ್ವಾಮಿ ವಿವೇಕಾನಂದರು ಹೇಳುತ್ತಿದ್ದರು, ವಿದೇಶಗಳಲ್ಲಿ ಧರ್ಮವನ್ನು ಬೋಧಿಸಬೇಕಾದರೆ ಅದರ ಭೌತಿಕ ಪ್ರಯೋಜನವನ್ನು ಹೇಳಬೇಕು ಮತ್ತು ಭಾರತದಲ್ಲಿ ಭೌತಿಕ ವಿಷಯವನ್ನು ಬೋಧಿಸಬೇಕಾದರೆ ಅದರ ಆಧ್ಯಾತ್ಮಿಕ ಪ್ರಯೋಜನವನ್ನು ಹೇಳಬೇಕು ಎಂದು.

ಆದರೆ ಈಗ ಕಾಲ ಬದಲಾಗಿದೆ. ಎಲ್ಲ ಕಡೆಯಲ್ಲಿಯೂ ಈಗ ಭೌತಿಕ ಪ್ರಯೋಜನವೇ ಪ್ರಧಾನವಾಗಿದೆ. ಯೋಗವೆಂಬುದು ಮುಖ್ಯವಾಗಿ ಆಧ್ಯಾತ್ಮಿಕ ಸಾಧನೆಯಾದರೂ ಅದರ ಭೌತಿಕ ಅಂಶಕ್ಕೆ ಮಾತ್ರ ಪ್ರಾಧಾನ್ಯ ನೀಡಲಾಗುತ್ತಿದೆ. ಯೋಗಾಸನಗಳು ಭೌತಿಕ ವ್ಯಾಯಾಮ ಮತ್ತು ಕಸರತ್ತುಗಳಾಗಿ ಪರಿಣಮಿಸಿವೆ. ಪ್ರಾಣಾಯಾಮ ಧ್ಯಾನಾದಿಗಳು ನರಬಿಗಿತ ಒತ್ತಡಗಳ ಪರಿಹಾರಕ್ಕಾಗಿ, ದೇಹಾರೋಗ್ಯಕ್ಕಾಗಿ ಬಳಸಲ್ಪಡುತ್ತಿವೆ. ಯೋಗೋ ಭವತಿ ದುಃಖಹಾ ಎಂಬ ಶ್ರೀಕೃಷ್ಣನ ಮಾತು ಭೌತಿಕ ಹಂತದಲ್ಲಾದರೂ ಸತ್ಯವಾಗುತ್ತಿದೆ.

ಅಮೆರಿಕದಲ್ಲಿ ಚಿಕ್ಕಮಕ್ಕಳೂ ಕೂಡ ಯೋಗಾಭ್ಯಾಸ ಮಾಡುತ್ತಾರಂತೆ. ಮಿಚಿಗನ್ ಸಿಟಿಯಲ್ಲಿರುವ 'ಯೋಗ ಕಿಡ್ಸ್' ಎಂಬ ಸಂಸ್ಥೆಯು ಮಕ್ಕಳಿಗೆ ಯೋಗವನ್ನು ಕಲಿಸಲು ವಯಸ್ಕರಿಗೆ ತರಬೇತಿಯನ್ನು ನೀಡುತ್ತಿದೆಯಂತೆ. ಆ ಸಂಸ್ಥೆಯು ಸಿದ್ಧಪಡಿಸಿದ ಯೋಗ ಕಿಡ್ಸ್ ಎಂಬ ವೀಡಿಯೋ ಷೋದ ಪ್ರತಿಗಳು ೧೯೯೭ರಿಂದ ೮೦,೦೦೦ ಮಾರಾಟವಾಗಿವೆಯಂತೆ. ಕೆಲವರು ಇಷ್ಟು ಚಿಕ್ಕ ಮಕ್ಕಳಿಗೆ ಯೋಗಾಭ್ಯಾಸ ಒಳ್ಳೆಯದಲ್ಲ ಎಂದು ಹೇಳುತ್ತಾರೆ. ಆದರೆ ಒಳ್ಳೆಯದು ಎಂದು ಹೇಳುವವರ ವಾದವೇ ಪ್ರಬಲವಾಗಿದೆ.

ಚಿಕ್ಕಮಕ್ಕಳು ತಲೆಕೆಳಗಾಗಿ ನಿಲ್ಲುತ್ತಾರೆ, ಕೈಮೇಲೆ ಓಡಾಡುತ್ತಾರೆ, ಶವದಂತೆ ಮಲಗುತ್ತಾರೆ, ನೇರವಾಗಿ ಕುಳಿತು ಪ್ರಾಣಾಯಾಮ ಮಾಡುತ್ತಾರೆ, ಕಣ್ಮುಚ್ಚಿಕೊಂಡು ಓಂಕಾರ ಉಚ್ಚರಿಸುತ್ತ ಧ್ಯಾನ ಮಾಡುತ್ತಾರೆ. ಹೀಗೆ ಯೋಗ 'ಮಕ್ಕಳಾಟ'ವಾಗಿದೆ.

ಹಿಂದೆ ಮಕ್ಕಳು ಆಟಕ್ಕಾಗಿ ಇಂತಹವುಗಳನ್ನು ಮಾಡುತ್ತಿದ್ದರು. ಈಗ ಆ ಆಟವೇ ಪಾಠವಾಗಿದೆ. ಮುಂದೆ, ಕೆಲವರ ಅಭಿಪ್ರಾಯದ ಪ್ರಕಾರ, 'ಕಾಟ'ವೂ ಆಗಬಹುದು. ಕೆಲವು ಕಾಲದ ನಂತರ ಅದರ ಪರಿಣಾಮವೇನು ಎಂಬುದನ್ನು ಈಗಲೇ ಹೇಳಲಾಗುವುದಿಲ್ಲ.

ಅಂತು ನಮ್ಮ ಯೋಗ 'ಭೋಗಭೂಮಿ'ಯ ಜನರ ಅನುರಾಗಕ್ಕೆ ಪಾತ್ರವಾಗುತ್ತಿರುವುದೊಂದು ಯೋಗಾಯೋಗವೆಂದೇ ಹೇಳಬೇಕು. ನಮಗೆ ಇದು ಹೆಮ್ಮೆಯ ವಿಷಯ. ☆